ಜೀವನ, ಸಂದೇಶಗಳು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಇಂದಿನ ಕಲಹ ಮತ್ತು ಸಂಘರ್ಷಗಳನ್ನು ತಿಳಿಗೊಳಿಸಲು ಅತ್ಯಂತ ಅವಶ್ಯವಾದ ಮಾರ್ಗದರ್ಶಿ ಸೂತ್ರಗಳನ್ನು ನೀಡುತ್ತವೆ.

## ದಿವ್ಯಪ್ರೇಮದ ಹರಿಕಾರ

ಭೋಗಪದಾರ್ಥಗಳ ವಿಪರೀತ ಉಪಭೋಗ, ಮೊಬೈಲ್ ಫೋನ್, ಇಂಟರ್‌ನೆಟ್ ಮುಂತಾದ ಯಾಂತ್ರಿಕ ಸಾಧನಗಳ ಮೇಲೆ ಅತಿಯಾದ ಅವಲಂಬನೆ, ಇದರಿಂದಾಗಿ ಸುಶಿಕ್ಷಿತರ ಬದುಕನ್ನೂ ಕಾಡುತ್ತಿರುವ ಅರ್ಥಹೀನತೆ – ಇವು ಈ ಯುಗದ ಮತ್ತೆ ಕೆಲವು ಅನಿಷ್ಟಗಳು. ಇವುಗಳಿಂದ ತೊಳಲುತ್ತಿರುವ ಸಾಮಾನ್ಯ ಜನತೆ ಬಯಸುವುದು ಜಾತಿ, ಮತ, ಜನಾಂಗಗಳನ್ನು ಮೀರಿದ ವಿಶ್ವಾತ್ಮಕ ದಿವ್ಯಪ್ರೇಮದ ಅಮೃತಸ್ಪರ್ಶವನ್ನು. ಶ್ರೀರಾಮಕೃಷ್ಣರು ಈ ಬಗೆಯ ಪರಮಪಾವನ ಪ್ರೇಮದ ಅಗಾಧಗಣಿಯಾಗಿದ್ದಾರೆ. ಈ ಪ್ರೀತಿಯು  ಮಾನವಪ್ರೇಮದಂತಲ್ಲ, ದಿವ್ಯಾನುಭೂತಿಯಿಂದ ಹೊರಹೊಮ್ಮಿದ ವಿಶ್ವತಾದಾತ್ಮ್ಯತೆಯ ಫಲಶ್ರುತಿ. ಅದು ಕೇವಲ ಅತೀಂದ್ರಿಯ ಭಾವಸ್ಥಿತಿಗೆ ಸೀಮಿತವಾಗಿಲ್ಲ. ಜೀವನದ ಎಲ್ಲ ಹಂತಗಳಿಗೂ, ಸಮಾಜದ ಎಲ್ಲ ಸ್ತರಗಳಿಗೂ ಹರಿದು ಬಂದ ಪ್ರೇಮಪ್ರವಾಹವೇ ಆಗಿದೆ. **'ಶಿವಜ್ಞಾನೇ ಜೀವಸೇವಾ'** – ಪ್ರತಿಯೊಬ್ಬ ಮನುಷ್ಯನನ್ನೂ ಶಿವನೆಂದು ಕಂಡು, ಅವನ ಸೇವೆ ಮಾಡಬೇಕು ಎಂಬ ಅವರ ಸೂತ್ರಪ್ರಾಯ ಉಪದೇಶದಲ್ಲಿ ಈ ಭವ್ಯಪ್ರೇಮವು ಮಡುಗಟ್ಟಿ ನಿಂತಿದೆ.  ಶ್ರೀರಾಮಕೃಷ್ಣರಂತಹ ಆಧ್ಯಾತ್ಮಿಕ ವಿಭೂತಿಗಳು ಮಾತ್ರವೇ ಈ ಬಗೆಯ ನಿಃಸ್ವಾರ್ಥ ಪ್ರೇಮವನ್ನು ತೋರಬಲ್ಲರು. ಈ ಪ್ರೇಮಗಂಗೆಯು ಇಂದು ಜನರನ್ನು ಕಾಡುತ್ತಿರುವ ಪ್ರಾಪಂಚಿಕ ಕಲ್ಮಶವನ್ನು ಕಳೆದು, ಅವರ ಮನಸ್ಸು, ಹೃದಯಗಳನ್ನು ಪುನೀತಗೊಳಿಸಬಲ್ಲುದು. ಇದೇ ಈ ಯುಗಕ್ಕೆ ಅತ್ಯವಶ್ಯಕವಾಗಿ ಬೇಕಾದುದು.

## ಸತ್ಯಯುಗದ ಪ್ರವರ್ತಕ

ಶ್ರೀರಾಮಕೃಷ್ಣರ ಅವತರಣವಾದಾಗಿನಿಂದ ಸತ್ಯಯುಗ ಆರಂಭವಾಗಿದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಇದು ಅತಿಶಯೋಕ್ತಿಯಾಗಿ ಕಾಣಬಹುದು. ಆದರೂ ಅದು ನಿಜ. ಯಾರು ಈ ನವಯುಗದ ಅವತಾರಪುರುಷನ ಪದತಲದಲ್ಲಿ ಆಶ್ರಯವನ್ನು ಪಡೆದುಕೊಳ್ಳುತ್ತಾರೋ, ಅಂಥವರು ಅವರ ದಿವ್ಯಪ್ರೇಮ ಮತ್ತು ಪರಮಶಾಂತಿಯ ವಾರಸುದಾರರಾಗುತ್ತಾರೆ. ಇಂದಿನ ಸಂತ್ರಸ್ತ ಕಾಲದಲ್ಲಿಯೂ ಲೌಕಿಕ–ಪಾರಮಾರ್ಥಗಳೆಂಬ ಭೇದಗಳನ್ನು ಕಳೆದು, ಭಗವನ್ಮಯ ಜೀವನವನ್ನು ಕೈಗೊಳ್ಳುವ ಅರ್ಹತೆ ಅವರಿಗೆ ಬರುತ್ತದೆ. ಅಂತಹ ಸೌಭಾಗ್ಯಶಾಲಿಗಳು ಸಾಂಸಾರಿಕ ಜಂಜಾಟದ ಮಧ್ಯೆಯೂ ಮಾನಸಿಕ ಸ್ತಿಮಿತವನ್ನೂ ನೆಮ್ಮದಿಯನ್ನೂ ಕಾಪಾಡಿಕೊಳ್ಳುತ್ತಾರೆ. ಇವರ ಪಾಲಿಗಂತೂ ಸತ್ಯಯುಗವು ಅನಾವರಣಗೊಳ್ಳುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ, ಯಾವುದೇ ರೀತಿಯಿಂದ ನೋಡಿದರೂ, ಶ್ರೀರಾಮಕೃಷ್ಣರು ಈ ಯುಗದ ಆದರ್ಶಪುರುಷರಾಗಿದ್ದಾರೆ. ಅವರ ಜೀವನ–ಸಂದೇಶಗಳು ಕಾಲಕಳೆದಂತೆ ಹೆಚ್ಚು ಹೆಚ್ಚು ಆವಶ್ಯಕವೂ, ಪ್ರಸ್ತುತವೂ ಆಗುತ್ತ ಸಾಗಿರುವುದನ್ನು ನಾವು ಗುರುತಿಸಬಹುದು. ಹಾಗೆಂದೇ ಸ್ವಾಮಿ ವಿವೇಕಾನಂದರು ಅವರನ್ನು 'ಅವತಾರವರಿಷ್ಠ' (ಈ ಯುಗಕ್ಕೆ ಪ್ರಸ್ತುತರಾದ ಅವತಾರಪುರುಷರು) ಎಂದು ಕರೆದು ಆರಾಧಿಸುತ್ತಾರೆ.

**(ಮುಂದಿನ ತಿಂಗಳ ಸಂಚಿಕೆಯಿಂದ 'ಶ್ರೀರಾಮಕೃಷ್ಣ ಕಥಾಪ್ರಪಂಚ' ಸಂಪಾದಕೀಯ ಲೇಖನಮಾಲೆ ಮುಂದುವರಿಯುತ್ತದೆ – ಸಂ.)** •

## ಶ್ರೀರಾಮಕೃಷ್ಣ ಸಂಭಾಷಣ ಸುಧೆ


**ಭಕ್ತ : ಏನು ಮಾಡಿದರೆ ಭಗವಂತನ ಕೃಪೆಯೊದಗುತ್ತದೆ?**

**ಶ್ರೀರಾಮಕೃಷ್ಣರು:** "ಭಗವಂತನ ನಾಮಗುಣಕೀರ್ತನೆಯನ್ನು ಸರ್ವದಾ ಮಾಡುತ್ತಿರಬೇಕು. ವಿಷಯಚಿಂತನೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ತ್ಯಜಿಸಬೇಕು. ನೀನು ಬೆಳೆ ಬೆಳೆಯಲು ಬಹಳ ಶ್ರಮವಹಿಸಿ ಗದ್ದೆಗೆ ನೀರು ತರಬಹುದು. ಆದರೆ ತೆವರಿಯಲ್ಲಿರುವ ಬಿಲಗಳ ಮೂಲಕ ನೀರೆಲ್ಲಾ ಹೊರಕ್ಕೆ ಹರಿದುಹೋಗಿಬಿಡುತ್ತದೆ ಅಂತ ಇಟ್ಟುಕೋ. ಆಗ ನಾಲೆ ತೋಡಿ ನೀರು ತಂದದ್ದೆಲ್ಲಾ ವೃಥಾ ಪರಿಶ್ರಮ.

"ಚಿತ್ತಶುದ್ಧಿಯಾಯಿತು ಎಂದರೆ, ವಿಷಯಾಸಕ್ತಿ ಹೊರಟುಹೋಯಿತು ಅಂದರೆ, ವ್ಯಾಕುಲತೆಯುಂಟಾಗುತ್ತದೆ. ಆಗ ಮಾತ್ರವೇ ನಿನ್ನ ಪ್ರಾರ್ಥನೆ ಭಗವಂತನನ್ನು ಮುಟ್ಟುತ್ತದೆ. ಟೆಲಿಗ್ರಾಫ್ ತಂತಿಯಲ್ಲಿ ಬೇರೆ ವಸ್ತು ಬೆರೆತುಕೊಂಡಿದ್ದರೆ ಅಥವಾ ಅದು ಕಿತ್ತುಹೋಗಿದ್ದರೆ ವಾರ್ತೆಯನ್ನು ಅದು ಹೊತ್ತುಕೊಂಡು ಹೋಗಲಾರದು.

"ನಾನು ವ್ಯಾಕುಲನಾಗಿ ಒಬ್ಬನೇ ಏಕಾಂಗಿಯಾಗಿ ಅಳುತ್ತಿದ್ದೆ: 'ಹೇ ಭಗವಂತ ಎಲ್ಲಿದ್ದೀಯೋ?' ಅಂತ, ಹಾಗೇ ಅಳುತ್ತ ಅಳುತ್ತ ಬಾಹ್ಯಜ್ಞಾನಶೂನ್ಯನಾಗಿಬಿಡುತ್ತಿದ್ದೆ. ನನ್ನ ಮನಸ್ಸು ಆಗ ಮಹಾವಾಯುವಿನಲ್ಲಿ ಲೀನವಾಗಿಬಿಡುತ್ತಿತ್ತು.

"ಯೋಗ ಯಾವುದರಿಂದ ದೊರೆಯುತ್ತದೆ? ಒಮ್ಮೆಗೇ ವಿಷಯಾಸಕ್ತಿಯನ್ನು ತ್ಯಾಗಮಾಡುವುದರಿಂದ. ಯಾವ ನ್ಯೂನತೆ ಇಲ್ಲದ ಟೆಲಿಗ್ರಾಫ್ ತಂತಿಯ ಹಾಗೆ ಮನಸ್ಸು ಕಳಂಕರಹಿತವಾಗಿಯೂ ಶುದ್ಧವಾಗಿಯೂ ಇರಬೇಕು." •



# ಭಾಗವತ ದರ್ಶನ

ಸ್ವಾಮಿ ಹರ್ಷಾನಂದ

**ಭಾಗವತವು ಉನ್ನತವಾದ ಜ್ಞಾನ ಮತ್ತು ಶ್ರೇಷ್ಠವಾದ ಭಕ್ತಿಭಾವಗಳು ಮೇಳವಿಸಿರುವ ಸಮನ್ವಯ ಗ್ರಂಥ. ಈ ಪರಮಪಾವನ ಗ್ರಂಥದಲ್ಲಿನ ತಾತ್ತ್ವಿಕ ಅಂಶಗಳ ಸಮೀಕ್ಷೆಯನ್ನು ಈ ವಿದ್ವತ್ಪೂರ್ಣ ಲೇಖನದಲ್ಲಿ ಕಾಣಬಹುದು. ಪರಮಪೂಜ್ಯ ಸ್ವಾಮೀಜಿಯವರು ಬೆಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರು. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತಗಳಲ್ಲಿ ಇವರ ಹಲವಾರು ಗ್ರಂಥಗಳು, ಅನುವಾದಗಳು ಪ್ರಕಟವಾಗಿವೆ.**

ಭಾಗವತವು ದಿವ್ಯಜೀವನದ, ದಿವ್ಯಪ್ರೇಮದ ಒಂದು ಸುಂದರ ಗಾಥೆ. ಅದು ದರ್ಶನಗ್ರಂಥವಲ್ಲ. ಅದು 'ವಿಜ್ಞಾನ'ದ ಆಧಾರದ ಮೇಲೆ ರಚಿತವಾದ ಸುಂದರ ಕಾವ್ಯ. ವಿಜ್ಞಾನವೆಂದರೆ ಸದ್ವಸ್ತುವಿನ ನೇರ ಅನುಭವ. ಈ ವಿಜ್ಞಾನದಲ್ಲಿ ಜ್ಞಾನವೂ ಸೇರಿದೆ. ಜ್ಞಾನವೆಂದರೆ ನೇರ ಅನುಭವದ ಹಿನ್ನೆಲೆಯಲ್ಲಿ ರಚಿತವಾದ ತತ್ತ್ವಶಾಸ್ತ್ರ.

## ಪಾರಮಾರ್ಥಿಕ ಸತ್ಯ

ಭಾಗವತದ ಪ್ರಕಾರ ಪರಬ್ರಹ್ಮ ಅಥವಾ ಆತ್ಮವೇ ಪಾರಮಾರ್ಥಿಕ ಸತ್ಯ. ನಾಮ ರೂಪಸಹಿತವಾದ ಈ ಜಗತ್ತು, ಆ ಸತ್ಯವೇ ಮೈವೆತ್ತ ರೂಪ. ಪಾರಮಾರ್ಥಿಕ ಸತ್ಯವನ್ನು, ಪರಮಾತ್ಮ, ಪ್ರತ್ಯಗಾತ್ಮ, ಪುರುಷೋತ್ತಮ, ಅಕ್ಷರ, ತುರೀಯ – ಹೀಗೆ ಅನೇಕ ಪದಗಳಿಂದ ಸೂಚಿಸುತ್ತಾರೆ. ಇವೆಲ್ಲವೂ ಉಪನಿಷತ್ತಿನಲ್ಲಿ ಕಾಣಬರುವ ಪದಗಳೇ. ಭಾಗವತವು ಆ ಸತ್ಯವನ್ನು ಕೃಷ್ಣ, ವಾಸುದೇವ, ನಾರಾಯಣ, ಹರಿ ಮುಂತಾದ ನಾಮಗಳಿಂದಲೂ ಕರೆಯುತ್ತದೆ. ಆದರೆ ಆ ಸತ್ಯವು ಶಬ್ದ, ಭಾವನೆಗಳಿಗೆ ಅತೀತವಾದ (ಅವಾಙ್ಮಾನಸಗೋಚರ), ಎಲ್ಲ ಎಲ್ಲೆಕಟ್ಟಿನಿಂದ ದೂರವಾದ ಶುದ್ಧ ಪ್ರಜ್ಞೆ.

ಭಾಗವತವು ನಾಲ್ಕು ಪ್ರಮಾಣಗಳನ್ನು ಮುಖ್ಯವಾಗಿ ಅಂಗೀಕರಿಸುತ್ತದೆ:

೧. **ಪ್ರತ್ಯಕ್ಷ (ನೇರಗ್ರಹಿಕೆ)**

೨. **ಅನುಮಾನ (ಊಹೆ)**

೩. **ಆಪ್ತವಾಕ್ಯ (ಸಾಧುಸಂತರ ಆಧ್ಯಾತ್ಮಿಕ ಅನುಭವ ಪರಂಪರೆ)**

೪. **ಶ್ರುತಿ (ವೇದಗಳು)**

ಆದರೆ ಇವೆಲ್ಲವೂ ಬ್ರಹ್ಮಕ್ಕೆ ದಾರಿ ತೋರುವುವೇ ಹೊರತು, ನೇರವಾಗಿ ಬ್ರಹ್ಮಾನುಭವವನ್ನು ನೀಡುವುದಿಲ್ಲ.

ಭಾಗವತವು ಪರಬ್ರಹ್ಮವನ್ನು ಪುರುಷೋತ್ತಮನೆಂದೂ, ಸೃಷ್ಟಿಕರ್ತನೆಂದೂ, ಸ್ಥಿತಿರಕ್ಷಕನೆಂದೂ, ಸ್ಥೂಲ ಮತ್ತು ಸೂಕ್ಷ್ಮ ಜಗತ್ತಿನ ಅಂತಿಮ ಆಶ್ರಯದಾತನೆಂದೂ ವರ್ಣಿಸಿದೆ. ಪರಬ್ರಹ್ಮನು ಇಡೀ ವಿಶ್ವದ ಎಲ್ಲ ಅಣುಗಳಲ್ಲಿಯೂ ವ್ಯಾಪಿಸಿದ್ದು ತನ್ನ ಮಹಿಮೆಯನ್ನು ತೋರುತ್ತಿರುವನು. ಮಾಯೆಯು ಅವನ ಅನಂತ ಶಕ್ತಿ. ಅವನು ನಿರ್ವಿಕಾರನಾದರೂ, ಭಕ್ತರು ಬಯಸಿದ ರೂಪವನ್ನು ತಾಳಿ ಅವರ ಪೂಜೆಯನ್ನು ಸ್ವೀಕರಿಸುವನು.

ಭಾಗವತವು ಸಾಕಾರ ಸಗುಣ ಭಗವಂತನಿಗೆ ಹೆಚ್ಚು ಒತ್ತು ಕೊಟ್ಟಿದೆ. ಏಕೆಂದರೆ ಸಾಕಾರ ಭಗವಂತನು ಪ್ರೇಮಕ್ಕೆ, ಭಕ್ತಿಗೆ, ಪೂಜೆಗೆ ಹೆಚ್ಚು ಅನುಕೂಲನಾಗಿದ್ದಾನೆ. ಭಾಗವತವು ಹೇಳುತ್ತದೆ: **"ಶ್ರೀಕೃಷ್ಣನೇ ಭಗವಂತ ಅಥವಾ ಭಗವಂತನೇ ಶ್ರೀಕೃಷ್ಣ."**

‘ಭಗವತ್’ ಎಂಬುದು ಭಾಗವತದ ಕೇಂದ್ರ ಭಾವನೆಯಾಗಿದೆ. ‘ಭಗವಾನ್’ ಎಂಬ ಶಬ್ದವನ್ನು ಸಾಕಾರ ಭಗವಂತನಿಗೂ, ನಿರಾಕಾರ ಸದ್ವಸ್ತುವಿಗೂ ಬಹಳಷ್ಟು ಬಾರಿ ಉಪಯೋಗಿಸಿದೆ. ಭಗವಾನ್ ಎಂದರೆ ‘ದಯಾಮಯ’, ‘ಪೂಜಾರ್ಹ’, ‘ಆರಾಧನೆಗೆ ಸುಲಭಸ್ವೀಕಾರಾರ್ಹ’ ಎಂದರ್ಥ. ಈ ಶಬ್ದವನ್ನು ಸಾಧುಸಂತರಿಗೆ ಗೌರವ ನೀಡುವ ಸಲುವಾಗಿಯೂ ಉಪಯೋಗಿಸುತ್ತಾರೆ.

ಅನಂತರ ಬರುವುದೇ ಅವತಾರದ ಕಲ್ಪನೆ. ‘ಅವತಾರ’ ಎಂದರೆ ‘ಕೆಳಕ್ಕೆ ಇಳಿದು ಬರುವುದು’ ಎಂದರ್ಥ. ಭಗವಂತ ಕೆಳಕ್ಕೆ ಇಳಿದುಬರುವುದೇ ಒಬ್ಬ ಜೀವಂತ ವ್ಯಕ್ತಿಯಾಗಿ. ಹಾಗೆ ಅವತರಿಸಿ ಜಗತ್ತಿನಲ್ಲಿ ಉಂಟಾಗಿದ್ದ ಆಧ್ಯಾತ್ಮಿಕ ಅಸಮತೋಲನವನ್ನು ಸರಿಪಡಿಸಿ, ಮಾನವಕುಲವು ದೈವತ್ವಕ್ಕೆ ಏರಲು ನೆರವಾಗುವುದೇ ಅವನ ಗುರಿ. ಭಾಗವತವು ಭಗವಂತನ ಅನೇಕ ಅವತಾರಗಳನ್ನು ಕುರಿತು ಹೇಳುತ್ತದೆ. ಈ ಅವತಾರಗಳಿಗೆ ಸಂಖ್ಯೆಯಲ್ಲಾಗಲಿ, ಕ್ರಮದಲ್ಲಾಗಲಿ ಸಮಾನತೆ ಕಂಡುಬರುವುದಿಲ್ಲ. ಅವು ಹತ್ತರಿಂದ ನಲವತ್ತರವರೆಗೂ ಇರಬಹುದು.

ಭಾಗವತವು ಭಗವಾನ್ ವಿಷ್ಣುವಿನ ನಾಲ್ಕು ವ್ಯೂಹಗಳನ್ನು ಪರಿಚಯ ಮಾಡಿಕೊಡುತ್ತದೆ. ಈ ವ್ಯೂಹಗಳನ್ನು ಕೆಲವೊಮ್ಮೆ ಅವತಾರಗಳ ಜೊತೆ ಜೋಡಿಸುವುದು ರೂಢಿಯಲ್ಲಿದೆ. ಅವತಾರಗಳು, ಜಗತ್ತಿನಲ್ಲಿ ಕ್ಷೋಭೆ ಆದಾಗ ಭಗವಂತನು ಕೈಗೊಳ್ಳುವ ಕಾರ್ಯರೂಪಗಳು. ವ್ಯೂಹಗಳು ಅವತಾರಗಳಿಗಿಂತ ಭಿನ್ನವಾದುವು. ಈ ವ್ಯೂಹಗಳು ನಾಲ್ಕು. **೧. ವಾಸುದೇವ ೨. ಸಂಕರ್ಷಣ ೩. ಪ್ರದ್ಯುಮ್ನ ೪. ಅನಿರುದ್ಧ.** ಈ ವ್ಯೂಹಗಳು, ಷಡ್ಗುಣಗಳ ಅಥವಾ ಭಾಗಗಳ (ಜ್ಞಾನ, ಬಲ, ಐಶ್ವರ್ಯ, ಸ್ವಾಮಿತ್ವ ಇತ್ಯಾದಿ) ಭಿನ್ನ ಭಿನ್ನ ಆವಿರ್ಭಾವಗಳು. ವಾಸುದೇವನಲ್ಲಿ ಆರು ಗುಣಗಳೂ ಪೂರ್ಣಪ್ರಮಾಣದಲ್ಲಿವೆ. ಉಳಿದ ಮೂವರಲ್ಲಿ, ಎರಡೆರಡು ಗುಣಗಳು ಪ್ರಧಾನವಾಗಿದ್ದು ಉಳಿದ ನಾಲ್ಕು ಸುಪ್ತಾವಸ್ಥೆಯಲ್ಲಿರುತ್ತವೆ.

ಋಗ್ವೇದದ ಕಲ್ಪನೆಯಾದ ‘ಪುರುಷ’ನನ್ನು ನಾವು ಇಲ್ಲಿ ಕಾಣಬಹುದು. ಆ ವಿರಾಟ್‌ಪುರುಷನೇ ಯಾವ ಭೇದವೂ ಇಲ್ಲದೆ ತಾನೇ ವ್ಯಕ್ತಿಯಾಗಿ, ಇಡೀ ವಿಶ್ವವಾಗಿ ಪ್ರಕಟನಾಗುವನು. ಅವನೇ ‘ಪುರುಷೋತ್ತಮ’. ಕೃಷ್ಣನೇ ಅಂತಹ ಪುರುಷೋತ್ತಮ.

ಭಗವಂತನ ಶಕ್ತಿಯಾದ ಮಾಯೆಯ ವಿಚಾರವನ್ನು ನಾವು ಇಲ್ಲಿ ಕಾಣಬಹುದು. ಮಾಯೆಗೆ ಮೂರು ಗುಣಗಳಿವೆ – ಸತ್ತ್ವ, ರಜಸ್ಸು ಮತ್ತು ತಮಸ್ಸು. ಭಗವಂತನ ಇಚ್ಛೆಯಂತೆ, ಈ ತ್ರಿಗುಣಗಳ ಸಮತ್ವದಲ್ಲಿ ಏರುಪೇರಾದಾಗ, ತ್ರಿಗುಣಗಳ ಸಂಯೋಜನೆಯಿಂದ ಜಗತ್ತು ಪ್ರಕಟವಾಗುತ್ತದೆ. ಅಯಸ್ಕಾಂತವು ತಾನು ಒಂದೆಡೆ ಇದ್ದು ಕಬ್ಬಿಣದ ಹುಡಿಗಳಲ್ಲಿ ಚಲನೆಯನ್ನು ಪ್ರೇರೇಪಿಸುವಂತೆ, ಭಗವಂತನು ತಾನು ನಿಷ್ಕ್ರಿಯನಾಗಿದ್ದು, ತನ್ನ ಇಚ್ಛೆಯಂತೆ ತ್ರಿಗುಣಗಳಲ್ಲಿ ಸಂಚಾಲನೆಯನ್ನು ನೀಡುವನು. ಈ ಪ್ರಕ್ರಿಯೆಯು, ಭಗವಂತನ ಭಕ್ತರಿಗೆ, ಅವನ ‘ಲೀಲೆ’ ಎನಿಸುವುದು. ಭಗವಂತನಿಗೆ ಇದರಲ್ಲಿ ಸಂತೋಷ; ಏಕೆಂದರೆ ಬಂಧನದಲ್ಲಿದ್ದು ಇನ್ನೂ ಕಷ್ಟಪಡುತ್ತಿರುವ ಜೀವಾತ್ಮರಿಗೆ ಬಿಡುಗಡೆ ನೀಡುವುದೇ ಈ ಪ್ರಕ್ರಿಯೆಯ ಉದ್ದೇಶ.

### ಸಾಧನಾಕ್ರಮ

ಭಾಗವತದ ಉಪದೇಶಗಳಲ್ಲಿ ಮುಖ್ಯವಾದುದು, ಪರಿಪೂರ್ಣತೆಯನ್ನು ಪಡೆಯಲು ಅದು ಬೋಧಿಸುವ ಸಾಧನಾಕ್ರಮ. ಭಕ್ತಿ ಅಥವಾ ಪ್ರೇಮ ಉನ್ನತ ಸ್ಥಾನ ಪಡೆದಿದ್ದರೂ, ಜ್ಞಾನ, ಯೋಗ, ಕರ್ಮಗಳೂ ಆ ಸಾಧನಾಕ್ರಮದಲ್ಲಿ ಮುಖ್ಯ ಸ್ಥಾನವನ್ನು ಅಲಂಕರಿಸಿವೆ. ಭಕ್ತಿಯು ಸಹಜ ಪ್ರವೃತ್ತಿಯಾದುದರಿಂದ, ಪರಿಪೂರ್ಣತೆಗೆ ಅದು ಸುಲಭ ಮಾರ್ಗವೆಂದು ಆದ್ಯತೆ ನೀಡಲಾಗಿದೆ.

ಭಕ್ತಿಯಲ್ಲಿ ಎರಡು ಅಂಶಗಳಿವೆ. ಭಕ್ತಿಮಾರ್ಗದಲ್ಲಿ, ಇನ್ನೂ ಆರಂಭದ ಹಂತದಲ್ಲಿ ಅನುಸರಿಸಬೇಕಾದ ಶಿಸ್ತನ್ನು ಅಥವಾ ಕಟ್ಟುಪಾಡನ್ನು ‘ಸಾಧನಾಭಕ್ತಿ’ ಅಥವಾ ‘ವೈಧೀಭಕ್ತಿ’ ಎಂದು ಕರೆಯುವರು. ಇದರಲ್ಲಿ ಕರ್ಮಭಾಗವೇ ಹೆಚ್ಚು – ಪೂಜೆ, ಭಗವನ್ನಾಮ ಜಪ, ಸಂಕೀರ್ತನೆ ಮತ್ತು ಶಾಸ್ತ್ರೋಕ್ತವಾದ ಕರ್ಮಗಳು. ಈ ಸಾಧನೆ ಮುಂದುವರಿದಂತೆ ಭಕ್ತಿಯು ಅಧಿಕವಾಗಿ, ‘ಏಕಾಂತಿಕೀ’, ‘ಅಹೈತುಕೀ’, ‘ಆತ್ಯಂತಿಕೀ’ (ತೀವ್ರ ಏಕಮುಖಿ) ಭಕ್ತಿ ಎನಿಸುವುದು. ಇದರಲ್ಲಿ ದೈವೀಪ್ರೇಮವು, ಯಾವ ಅಡೆತಡೆಯಿಲ್ಲದೆ, ನದಿಯು ಸಾಗರವನ್ನು ಸೇರುವಂತೆ, ಭಗವಂತನ ಕಡೆಗೆ ಹರಿಯುತ್ತಿರುವುದು. ಇದನ್ನೇ ‘ನಿರ್ಗುಣಭಕ್ತಿ’ ಎಂದೂ ಕರೆಯುವರು. ಯಾವ ಭಕ್ತರು ಈ ತೀವ್ರ ಭಕ್ತಿಯ ಸ್ಥಿತಿಯನ್ನು ಮುಟ್ಟಿರುವರೋ ಅವರಿಗೆ ‘ಮಹಾಭಾಗವತ’, ‘ಭಾಗವತೋತ್ತಮ’ ಎಂದು ಹೆಸರು.

ಭಕ್ತಿಯ ಗುರಿ, ಇಷ್ಟದೇವತೆ, ಯಾವುದಾದರೊಂದು ಅವತಾರ, ಅಥವಾ ಇಡೀ ವಿಶ್ವದ ಕಡೆ ಇರಬಹುದು. ಇವುಗಳಲ್ಲಿ ಒಂದು ಅವತಾರದಲ್ಲಿ ಭಕ್ತಿಯನ್ನಿಡುವುದು ಅತಿ ಸುಲಭ, ನಿರಾಳ ಹಾಗೂ ಸವಿಯಾದುದು. ಭಕ್ತನು ತನ್ನ ಆರಾಧ್ಯದೈವದ ಮೇಲೆ ಇಟ್ಟಿರುವ ಭಾವನೆ ಮತ್ತು ಬಾಂಧವ್ಯಗಳ ಆಧಾರದ ಮೇಲೆ, ಭಕ್ತಿಯು ಶಾಂತ, ದಾಸ್ಯ, ವಾತ್ಸಲ್ಯ, ಸಖ್ಯ, ಮಾಧುರ್ಯ ಮುಂತಾದ ನಾನಾ ರೂಪಗಳನ್ನು ತಾಳಬಹುದು.